ಕೆಲವೇ ಶ್ರೀಮಂತರಲ್ಲಿ ಒಬ್ಬರ ಒಬ್ಬಳೇ ಮಗಳು ಆ ಪೇಶೆಂಟು. ಜಸ್ಟ್ ಕಂಪ್ಲೀಟೆಡ್ ನೈನ್‌ಟೀನ್ ಇಯರ್ಸ್. ಸೌಂದರ್ಯದಲ್ಲಿ ಕಿನ್ನರಿಯರನ್ನು ಮೀರಿಸ್ತಾಳೆ. ಬಟ್ ಅವಳ ಮನಸ್ಸು ವರ್ಸ್ಟ್ ಪಾಸಿಬಲ್ ಸಿಚುಯೇಷನ್ನಲ್ಲಿ ಮುಳುಗಿಬಿಟ್ಟಿದೆ. ಅವಳ ಇತಿಹಾಸ ನನಗೂ ಸರಿಯಾಗಿ ಗೊತ್ತಿಲ್ಲ. ಆಮ್ರಪಾಲಿಯರವರಿಗೆ ಎಲ್ಲಾ ಡೀಟೈಲ್ಸ್ ಗೊತ್ತಿದೆ. ಇನ್ನೂ ಒಂದು ಆತಂಕಕಾರಿ ವಿಷಯವೆಂದರೆ, ಅವಳ ಸುತ್ತಲೂ ದೊಡ್ಡ ಕ್ರಿಮಿನಲ್ ಸರ್ಕಲ್ ಸುತ್ತಿಕೊಂಡಿದೆಯಂತೆ. ಕೇಸ್‌ನ ಸಿಬಿಐನವರಿಗೆ ವಹಿಸಲಾಗಿದೆಯಂತೆ. ನಾನು ಇನ್ನೂ ಮೂರು ದಿನ ಇಲ್ಲೇ ಇರ್ತೀನಿ. ದೆಹಲಿಗೆ ಬಂದ ತಕ್ಷಣ ಫೋನ್ ಮಾಡ್ತೀನಿ. ಫ್ಯಾಮಿಲಿ ವಿಷಯದಲ್ಲಿ ನೀವೂ ಕೂಡಾ ಡಿಸ್ಟರ್ಬ್ ಆಗಿರುವಿರಂತೆ, ಭಗವಾನ್ ಕುಟ್ಟಿ ಹೇಳಿದ್ರು. ಎನಿವೇಸ್ ಲೆಟ್ಸ್ ಬಿ ಇನ್ ಟಚ್' ಎಂದು ಫೋನ್ ಕಟ್ ಮಾಡಿದ್ದಳು.

ನಾನು ಸಿಂಧೂ ಮೆನನ್ ಜೊತೆ ಮಾತನಾಡುತ್ತಾ ವಿಮಾನ ಇಳಿದು ಲಗೇಜ್ ಬೆಲ್ಟ್ ಬಳಿ ಬಂದಿದ್ದೆ. ಅವಳೊಂದಿಗೆ ಮಾತನಾಡುತ್ತಿರುವಾಗಲೇ ನನಗೆ ಬೇರೊಂದು ಕಾಲ್ ಬರುತ್ತಿರುವುದು ಅರಿವಾಗಿತ್ತು. ಹಾಗಾಗಿ ಅವಳೊಂದಿಗೆ ಮಾತು ಮುಗಿದ ತಕ್ಷಣ ಕಾಲ್ ಮಾಡುತ್ತಿದ್ದವರು ಯಾರಿರಬಹುದೆಂದು ಚೆಕ್ ಮಾಡಲು ನೋಡೋಣವೆಂದುಕೊಳ್ಳುತ್ತಿರುವಾಗ ಕಾಕಿಗಡ್ಡ ರಾಘವರೆಡ್ಡಿಯ ಫೋನ್. ರಿಸೀವ್ ಮಾಡಿಕೊಂಡಿದ್ದೆ. 'ಅರೆ, ಮಾರಾಯ ಆರೂವರೆ ಗಂಟೆಗೇನೇ ಏರ್‌ಪೋರ್ಟ್‌ಗೆ ಬಂದೆ ನಾನು. ಫ್ಲೈಟ್ ಒಂದು ಗಂಟೆ ಲೇಟ್ ಅಂತ ತಿಳಿಯಿತು. ಈಗ ಫೋನ್ ಮಾಡಿದ್ರೆ ಬರಿ ಬಿಜಿ. ನಾನೀಗ ಅರ್ರೈವಲ್ ಗೇಟ್ ಮುಂದೆ ನಿಂತಿದ್ದೀನಿ' ಎಂದು ಒಂದೇ ಸಮನೆ ಮಾತು ಬೀಸಿದ್ದ. 'ಎರಡು ನಿಮಿಷದಲ್ಲಿ ಅಲ್ಲಿರ್ತೀನಿ' ಎಂದು ಫೋನ್ ಇಟ್ಟಿದ್ದೆ.

'ಟ್ಯಾಕ್ಸಿ ಹಿಡಿದುಕೊಂಡು ನಾನೇ ಬರ್ತಿದ್ದೆ, ನೀವ್ಯಾಕೆ ಬರಲಿಕ್ಕೋದ್ರಿ' ಎಂದು ರಾಘರೆಡ್ಡಿಯನ್ನು ನೋಡಿದ ತಕ್ಷಣ ಹೇಳಿದ್ದೆ. 'ಹಾಂ, ನಾನೂ ಹಂಗೆ ಅಂದ್ಕೊಂಡಿದ್ದೆ. ಆದರೆ ಯಾಕೋ ಏರ್‌ಪೋರ್ಟ್‌ಗೆ ಒಂದು ರೈಡ್ ಹೋಗಿ ಬರೋಣ ಅನ್ನಿಸ್ತು. ಹೇಗೂ ನೀನು ಬಂದ್ಯಲ್ಲ, ಪಿಕಪ್ ಮಾಡ್ಕೊಂಡೋಗೋಣ ಅಂತ' ತಮಾಷೆ ಮಾಡಿದ್ದ ರಾಘವರೆಡ್ಡಿ. 'ನಿಮ್ಮ ಮಾತುಗಳಲ್ಲಿ ತಮಾಷೆ ನೋಡಿದ್ರೆ ಪಿಸ್ತೂಲಾ ಕಂಟ್ರೋಲಿಗೆ ಬಂದಿದೆ ಅನ್ನಿಸ್ತಿದೆ' ಎಂದು ನಾನೂ ತಮಾಷೆ ಮಾಡಿದ್ದೆ. ಕಾರಿನ ಹತ್ತಿರ ಹೋದಾಗ ಬೆಂಜ್ ಕಾರಿನಲ್ಲಿ ಇನ್ನೊಬ್ಬ ವ್ಯಕ್ತಿ ಕುಳಿತಿದ್ದರು. ಆ ವ್ಯಕ್ತಿಯ ಕಣ್ಣು ಕೆಂಪಗೆ ಊದಿಕೊಂಡಿದ್ದವಲ್ಲದೆ ಮೂರು ದಿನಗಳಿಂದ ಶೇವಿಂಗ್ ಮಾಡದ ಲಕ್ಷಣಗಳು ಮುಖದಲ್ಲಿ ಕಂಗೊಳಿಸುತ್ತಿದ್ದವು. ನಾನು ಡ್ರೈವರ್ ಪಕ್ಕ ಮುಂದಿನ ಸೀಟಿನಲ್ಲಿ ಕುಳಿತಿದ್ದೆ. ಆ ವ್ಯಕ್ತಿಯೊಂದಿಗೆ ರಾಘವರೆಡ್ಡಿ ಹಿಂದಿನ ಸೀಟಿನಲ್ಲಿ ಕುಳಿತಿದ್ದ. ಕಾರು ಚಲಿಸಿದಂತೆ ನಾನು ಹಿಂತಿರುಗಿ ನೋಡಿ, 'ಎಂ ಎಲ್ಎ ಕೊಂಡಯ್ಯನವರಲ್ಲವೆ' ಎಂದಿದ್ದೆ. ರಾಘವರೆಡ್ಡಿ 'ಫೆಂಟಾಸ್ಟಿಕ್ ಬ್ರದರ್. ಕೊಂಡಯ್ಯ ಅಣ್ಣನ್ನ ಇವೊತ್ತೇ ನೀನು ಮೊದಲು ನೋಡ್ತಿರೋದು, ಅವರೇ ಅಂತ ಯಂಗೆ ಪತ್ತೆ ಹಚ್ಚಿಬಿಟ್ಟೆ. ಎಂಥ ಪತ್ತೆದಾರಿ ಬ್ರೈನ್ ನಿನ್ದು. ಇನ್ನ ಸಿಬಿಐನಲ್ಲಿರೋ ನಿಮ್ಮ ಬ್ರದರ್ಸ್ ಇಬ್ಬರ್ದು ಇನ್ನೆಷ್ಟು ಇಂಟೆಲಿಜೆಂಟ್ ಬ್ರೈನ್ಸ್ ಇರ್ಬೇಕು' ಎಂದು ರಾಘವರೆಡ್ಡಿ ಹೇಳಿದಾಗ ಕೊಂಡಯ್ಯ ಬೆಚ್ಚಿಬಿದ್ದವರಂತೆ, 'ಅಯ್ಯಪ್ಪ, ರಾಘವರೆಡ್ಡಿ, ಸಿಬಿಐ ಸುದ್ದಿ ಮಾತ್ರ ಎತ್ಬೇಡ' ಎಂದಿದ್ದರು.

'ಯಾಕಣ್ಣ ಏನಾಯ್ತು?' ಎಂದು ರಾಘವರೆಡ್ಡಿ ಸಮಾಧಾನವಾಗಿಯೇ ಕೇಳಿದ್ದ. 'ಅಯ್ಯೋ, ಆಗ ತಾನೇ ನಾನು ರಾಜಕೀಯಕ್ಕೆ ಇಳಿದಿದ್ದ ಕಾಲ. ಒಂದು ಐರನ್ ಓರ್ ಕಂಪನಿಯನ್ನು ನಡೆಸ್ತಿದ್ದೆ. ಐರನ್ ಓರ್ ಕಳ್ಳ ಸಾಗಾಣಿಕೆಯಲ್ಲಿ ವಿಪರೀತ ಲಾಭವಿತ್ತು. ಡೂಪ್ಲಿಕೇಟ್, ಫ್ರಾಡ್ ಲೈಸೆನ್ಸ್‌ಗಳನ್ನು ಬಳಸಿಕೊಂಡು ಸುಮಾರು ಜನ ಓರ್ extract ಮಾಡುತ್ತಿದ್ದರು. ಅಂಥ ಒಂದು ಕೇಸ್‌ನಲ್ಲಿ ವಿರೋಧಿಗಳು ನನ್ನನ್ನು ಸಿಲುಕಿಸಿದ್ದರು. ಸಿಬಿಐ ಕಸ್ಟಡಿಯಲ್ಲಿ ನಾಲ್ಕು ದಿನಗಳ ಕಾಲ ಇದ್ದೆ. ಅಬ್ಬಾ! ನೆನೆಸಿಕೊಂಡರೆ ಈಗಲೂ ಎದೆ ನಡುಗುತ್ತದೆ. ಆದರೆ ಸಿಬಿಐ ನನ್ನನ್ನು ಗೋಳಾಡಿಸಿದ ಮೇಲೆ ನನ್ನ ಅದೃಷ್ಟ ಸಖತ್ತಾಗಿ ಬದಲಾಗಿ ಹೋಯ್ತು. ಅದಾದ ನಾಲ್ಕು ವರ್ಷಗಳಲ್ಲಿ ಎಂಎಲ್ಎನೂ ಆದೆ. ಆದರೆ ಸಿಬಿಐಗೆ ಸಿಗಾಕಿಕೊಳ್ಳೋದೂ ಒಂದೇ, ಯಮಧರ್ಮರಾಯನ ಕೈಗೆ ಸಿಗಾಕ್ಕೊಳ್ಳೋದೂ ಒಂದೇ. ರಾಜಕೀಯದಲ್ಲಿರೋರು ಸಿಕ್ಕಿದರಂತೂ ತುಂಬಾನೇ ಹುರಿದುಕೊಂಡು ತಿಂತಾರೆ. ಆದರೆ ಅದಕ್ಕಿಂತಲೂ ಭೀಕರವಾದದ್ದು ಹೆಂಗಸರ ಕೈಗೆ ಸಿಗಾಕ್ಕೊಳ್ಳೋದು'. ಕೊನೆಯ ಮಾತುಗಳನ್ನು ಆಡುವಾಗ ಕೊಂಡಯ್ಯನವರ ದಪ್ಪ ತುಟಿಗಳು ಸ್ವಲ್ಪ ಅದುರಿದಂತೆ ಕಂಡಿದ್ದವು ನನಗೆ. 'ಇವರ ಅಣ್ಣಂದಿರಿಬ್ಬರು ಸಿಬಿಐನಲ್ಲಿ ಸೀನಿಯರ್ ಆಫೀಸರ್‌ಗಳು' ಎಂದು ರಾಘವರೆಡ್ಡಿ ನನ್ನನ್ನು ಪರಿಚಯಿಸಿದಾಗ ಕೊಂಡಯ್ಯನವರು 'ಶಾಂತಂ ಪಾಪಂ' ಎಂದು ಮೆಲ್ಲಗೆ ಕೈಯಿಂದ ಎರಡೂ ಕೆನ್ನೆಗಳನ್ನು ಬಡಿದುಕೊಂಡಿದ್ದರು. 'ಅಣ್ಣಾ, ಇವೊತ್ತು ಸಂಜೆ ಹೈದರಾಬಾದಿಗೆ ಹೋಗ್ತಿದಾರೆ. ನಾಡಿದ್ದರಿಂದ ಅಸೆಂಬ್ಲಿ ಸೆಷನ್ಸ್ ಶುರುವಾಗ್ತಿವೆ. ಅಂದಹಾಗೆ ಕೆ.ಎಮ್. ನಯ್ಯಾರ್ ಯಾವೊತ್ತು ಬರ್ತೀನಿ ಅಂದ್ರು' ಎಂದ ರಾಘವರೆಡ್ಡಿ ಮಾತಿಗೆ, 'ನಯ್ಯಾರ್ ಪರಿಹಾರ ಕಾರ್ಯಗಳಲ್ಲಿ ಬಹಳ ಬಿಜಿಯಾಗಿದ್ದಾರೆ. ಬಹುಶಃ ಇನ್ನೆರಡು ಮೂರು ದಿನಗಳಲ್ಲಿ ಬರಬಹುದು. ಆ ಬಗ್ಗೆ ತಿಳಿಸುವುದಾಗಿ ಹೇಳಿದ್ರು' ಎಂದಿದ್ದೆ.

ಮುಕ್ಕಾಲು ಗಂಟೆ ಪ್ರಯಾಣದಲ್ಲಿ ನಾನು ಸಾಕಷ್ಟು ತೂಕಡಿಸಿ ಗಾಢ ಮಂಪರಿನಲ್ಲಿ ತೂರಿಕೊಂಡಿದ್ದೆ. ಕಾರು ಆಂಧ್ರಭವನದ ಬಳಿ ನಿಂತಾಗ ಕೊಂಡಯ್ಯ ಸೀಟಿಗೆ ಒರಗಿ ಗೊರಕೆ ಹೊಡೆಯುತ್ತಿದ್ದರು. ರಾಘವರೆಡ್ಡಿ ನನ್ನ ಕಡೆ ನೋಡಿಕೊಂಡು 'ಪಾಪ, ಅಣ್ಣ ರಾತ್ರಿ ಮುಕ್ಕಾಲು ಬಾಟಲ್ ಓಲ್ಡ್ ಮಾಂಕ್ ರಮ್ ಕುಡಿದಿದ್ರೂ ಬೆಳಗಿನ ಜಾವ ನಾಲ್ಕು ಗಂಟೆಗೆಲ್ಲಾ ಎದ್ದು ಬಿಟ್ಟಿದ್ದ. ಹಾಗಾಗಿ ಏರ್‌ಪೋರ್ಟ್‌ಗೆ ಬರಲಿಕ್ಕೆ ಡಿಸೈಡ್ ಮಾಡ್ದೆ. ಯಂಗೋ ಒಂದು ಗಂಟೆ ಚನ್ನಾಗಿ ಮಲಗಿದ ಅಣ್ಣ' ಎಂದು ನಕ್ಕು ಕೈನಲ್ಲಿ ಮೆಲ್ಲಗೆ ತಿವಿದು ಕೊಂಡಯ್ಯನವರನ್ನು ಎಬ್ಬಿಸಿದ್ದ. ಕೊಂಡಯ್ಯ ಮಿಟ್ಟು ಬಿದ್ದವರಂತೆ ಎದ್ದು ಕಣ್ಣೊರೆಸಿಕೊಂಡಿದ್ದರು. ನನಗೊಂದು ಸಪರೇಟ್ ರೂಮನ್ನು ಮಾಡಿದ್ದರು. ಸ್ನಾನ ಮಾಡಿ ತಿಂಡಿಯನ್ನು ರೂಮಿಗೇ ತರಿಸಿಕೊಂಡು ತಿಂದಿದ್ದೆ. ಪಾರ್ಲಿಮೆಂಟ್ ಬಳಿ ಆಂಧ್ರದ ಎಂಪಿಯೊಬ್ಬರನ್ನು ಮೀಟ್ ಮಾಡಿ ಸರಿ ಹೋದ್ರೆ ಮಧ್ಯಾಹ್ನ ಊಟಕ್ಕೆ ಬರುವುದಾಗಿ, ಅಲ್ಲಿಯವರೆಗೆ ಮಲಗಿ ರೆಸ್ಟ್ ತೆಗೆದುಕೊಳ್ಳಲು ಹೇಳಿ ರಾಘವರೆಡ್ಡಿ ಕೊಂಡಯ್ಯನವರೊಂದಿಗೆ ತೆರಳಿದ್ದ. ಹತ್ತು ಗಂಟೆಗೆ ಮಲಗಿದವನಿಗೆ ಸರಿಯಾಗಿ ಹನ್ನೆರಡು ಗಂಟೆಗೆ ಎಚ್ಚರವಾಗಿತ್ತು. ರೀಸಸ್ ಮಾಡಿ ಬಂದು ಫೋನ್ ಆನ್ ಮಾಡಿದ್ದೆ. ಫೋನ್ ಆನ್ ಆಗುತ್ತಿದ್ದಂತೆ ರಿಂಗಾಗಿತ್ತು. ಅಣ್ಣ ವಿಕ್ರಮ್ ರೆಡ್ಡಿಯ ಹೆಸರು ಡಿಸ್‌ಪ್ಲೇ ಆಗುತ್ತಿತ್ತು. ನಾನು ಬೆಂಗಳೂರಿನಿಂದ ಕೇರಳಕ್ಕೆ ಹೊರಟ ದಿನ ಅಣ್ಣ ವಿಕ್ರಮ್ ರೆಡ್ಡಿಗೆ ಫೋನ್ ಮಾಡಿದ್ದಿದ್ದು. ಅಣ್ಣ ವಿಕ್ರಮ್ ರೆಡ್ಡಿಯೆಂದರೆ ನನಗೆ ಸ್ವಲ್ಪ ಭಯ. ತೀರಾ ಅವಶ್ಯಕತೆಯಿದ್ದರೆ ಮಾತ್ರ ಫೋನ್ ಮಾಡುತ್ತಾನೆ. ನಾನೂ ಅಷ್ಟೇ, ತುಂಬಾ ತುರ್ತು ಕೆಲಸವಿದ್ದರೆ ಮಾತ್ರ ಫೋನ್ ಮಾಡುವುದು. ಫೋನ್ ರಿಸೀವ್ ಮಾಡಿಕೊಂಡು 'ಹಲೋ ಅಣ್ಣ' ಎಂದಿದ್ದೆ. 'ಎಲ್ಲಿದ್ದೀಯ ಕ್ರಾಂತಿ?' — ಮಾತು ಗಂಭೀರವಾಗಿದ್ದವು. ಅಣ್ಣನ ಮಾತುಗಳೇ ಹಾಗೆ. ಎಷ್ಟಾದರಾಗಲೀ ಸಿಬಿಐ ಆಫೀಸರ್. 'ಕೊಚ್ಚಿನ್‌ನಿಂದ ಬೆಳಿಗ್ಗೆ ದೆಹಲಿಗೆ ಬಂದೆ. ನಿಮಗೆ ಫೋನ್ ಮಾಡಬೇಕು ಅಂದುಕೊಳ್ಳುತ್ತಿರುವಾಗಲೇ ನಿಮ್ಮಿಂದಲೇ ಫೋನ್ ಬಂತು. ಸದ್ಯ ಆಂಧ್ರಭವನದಲ್ಲಿ ಉಳಿದುಕೊಂಡಿದ್ದೇನೆ' ಎಂದಿದ್ದೆ.

'ಮಾರ್ನಿಂಗ್ ಎಂಟು ಗಂಟೆಯಲ್ಲಿ ಆಶಾ ಬೆಂಗತಮಲೆ ಫೋನ್ ಮಾಡಿದ್ದಳು. ಮದುವೆಯಾದ ಐದು ವರ್ಷಗಳಲ್ಲಿ ಒಂದೇ ಒಂದು ದಿನ ಕೂಡಾ ನೀನು ಅವಳನ್ನು ಪ್ರೀತಿಯಿಂದ ನೋಡಿಕೊಳ್ಳಲಿಲ್ಲವಂತೆ. ಹಾಗಾಗಿ ನಿನ್ನನ್ನು ಬಿಟ್ಟು ಹೋಗುವ ಗಟ್ಟಿಯಾದ ನಿರ್ಧಾರ ಮಾಡಿದಳಂತೆ. ಎಂಥ ಸಮಸ್ಯೆ ಎಂದು ನನಗೆ ಅರ್ಥವಾಗಲಿಲ್ಲ' ಎಂದ ಅಣ್ಣನ ಮಾತುಗಳಿಗೆ, 'ಇವೊತ್ತು ಭೇಟಿಯಾಗ್ತೀನಿ ನಿಮ್ಮನ್ನು. ಮನೆಗೆ ಬರ್ತೀನಿ, ಈ ಐದು ವರ್ಷಗಳಿಂದಲೂ ಪ್ರಯತ್ನಪಟ್ಟರೂ ನನಗೂ ಅವಳ ಸಮಸ್ಯೆ ಏನಂಥ ಅರ್ಥವಾಗಲಿಲ್ಲ.' ನನ್ನ ಮಾತುಗಳಿಂದ ಅವರಿಗೆ ಸಮಾಧಾನವಾಗಲಿಲ್ಲವೆಂದು ಕಾಣಿಸುತ್ತಿತ್ತು. 'ನೀನು ಯಾರೊಂದಿಗೋ ಫಿಸಿಕಲ್ ರಿಲೇಷನ್ ಇಟ್ಟುಕೊಂಡಿರುವುದಾಗಿ ಹೇಳಿದಳು. ಆ ಬಗ್ಗೆ ಅವಳ ಹತ್ತಿರ ಸುಮಾರು ಸಾಕ್ಷ್ಯಾಧಾರಗಳಿವೆ ಎಂದೂ ಹೇಳಿದಳು. ಹೈಯರ್ ಪೋಸ್ಟ್‌ನಲ್ಲಿರುವ ನಮಗೆ ಅವಮಾನ ಆಗುತ್ತದೆಂದು, ಎಲ್ಲವನ್ನು ಮರೆತು ಆಸ್ಟ್ರೇಲಿಯಾಗೆ ಹೋಗುತ್ತಿರುವುದಾಗಿ ಹೇಳಿದಳು'. ಅವರನ್ನು ಹೇಗೆ ಕನ್ವಿನ್ಸ್ ಮಾಡಬೇಕೆಂದು ತೋಚದೆ 'ಭೇಟಿಯಾದಾಗ ಹೇಳ್ತೀನಿ' ಎಂದಿದ್ದೆ. 'ನಾನು ಅರ್ಜೆಂಟ್ ಕ್ರಿಮಿನಲ್ ಕೇಸೊಂದರ ಇನ್ವೆಸ್ಟಿಗೇಷನ್‌ಗೆಂದು ನಿನ್ನೆ ರಾತ್ರಿ ಮಸ್ಸೂರಿಗೆ ಬಂದೆ. ದೆಹಲಿಗೆ ಬರುವುದು ಮೂರ್ನಾಲ್ಕು ದಿನಗಳಾಗಬಹುದು. ಅರ್ಜೆಂಟ್ ಇದ್ದರೆ ಇಲ್ಲಿಗೆ ಬಂದುಬಿಡು, ಇಲ್ಲದಿದ್ದರೆ ದೆಹಲಿಗೆ